All India Radio: Bangalore
National Bulletin In Kannada
29.06.2026 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ಸೀಶೆಲ್ಸ್ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪ್ರಧಾನಿ ನರೇಂದ್ರ ಮೋದಿ ಭಾಗಿ
2. ಯುಕೆ ಪ್ರವಾಸ ಸಂಪನ್ನಗೊಳಿಸಿ ಉನ್ನತಮಟ್ಟದ ನಿಯೋಗದೊಂದಿಗೆ ಗ್ರೀಸ್‌ಗೆ ಕೇಂದ್ರ ಸಚಿವ ಪಿಯೂಶ್ ಗೋಯಲ್ ಭೇಟಿ
3. ಅಮೆರಿಕ-ಇರಾನ್ ಸಂಘರ್ಷಕ್ಕೆ ತಾತ್ಕಾಲಿಕ ವಿರಾಮ ; ನಾಳೆಯಿಂದ ಮಾತುಕತೆ ಆರಂಭಿಸಲು ಸಹಮತ
4. ಎಫ್‌ಐಎಚ್ ಹಾಕಿ ಪ್ರೋ ಲೀಗ್ ; ಪೆನಾಲ್ಟಿ ಶೂಟೌಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ೩-೨ ಗೋಲುಗಳ ಜಯ
5. ಫಿಫಾ ವಿಶ್ವಕಪ್ ಫುಟ್ಬಾಲ್ ನಾಕೌಟ್ ಹಂತ ; ದಕ್ಷಿಣಆಫ್ರಿಕಾ ವಿರುದ್ಧ ಕೆನಡಾಗೆ ಜಯ

<><><><>

ಸೀಶೆಲ್ಸ್ ದೇಶದ ಸ್ವಾತಂತ್ರ್ಯದ ೫೦ನೇ ವರ್ಷದ ಸುವರ್ಣ ಮಹೋತ್ಸವದ ರಾಷ್ಟ್ರೀಯ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಗೌರವ ಅತಿಥಿಯಾಗಿ ಪಾಲ್ಗೊಂಡರು. ಇದರೊಂದಿಗೆ ಐತಿಹಾಸಿಕ ಗೌರವಕ್ಕೆ ಪಾತ್ರರಾದ ಭಾರತದ ಮೊದಲ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಉಭಯ ದೇಶಗಳ ನಡುವಿನ ನಿಕಟ ಮತ್ತು ವಿಶೇಷ ಪಾಲುದಾರಿಕೆಯನ್ನು ಅಂಗವಾಗಿ, ಭಾರತೀಯ ಭೂಸೇನೆ ಮತ್ತು ನೌಕಾಸೇನೆಯನ್ನೊಳಗೊಂಡ ಜಂಟಿ ರಕ್ಷಣಾ ಪಡೆಯ ತುಕಡಿ ಹಾಗೂ ಭಾರತೀಯ ನೌಕಾಸೇನೆಯ ಬ್ಯಾಂಡ್ ತಂಡವು ಅಲ್ಲಿನ ಪೆರೇಡ್‌ನಲ್ಲಿ ಭಾಗವಹಿಸಿದ್ದವು. ಇದರಜೊತೆಗೆ, ಭಾರತದ ಸುದೀರ್ಘ ಸ್ನೇಹದ ಸಂಕೇತವಾಗಿ ಭಾರತೀಯ ನೌಕಾಸೇನೆಯ 'ಐಎನ್‌ಎಸ್ ತರ್ಕಶ್' ಮತ್ತು 'ಐಎನ್‌ಎಸ್ ಇಕ್ಷಕ್' ಯುದ್ಧನೌಕೆಗಳು ವಿಕ್ಟೋರಿಯಾ ಬಂದರಿನಲ್ಲಿ ತಂಗಿದ್ದವು. ಈ ಐತಿಹಾಸಿಕ ಸಂದರ್ಭದಲ್ಲಿ ಪ್ರಧಾನಿ ಮೋದಿ ಸೀಶೆಲ್ಸ್‌ನ ಜನತೆಗೆ ಭಾರತದ ಪರವಾಗಿ ಶುಭ ಹಾರೈಸಿದರು. ಸೀಶೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್

ಹೆರ್ಮಿನಿ ಅವರ ಆಹ್ವಾನದ ಮೇರೆಗೆ ಕಳೆದ ಶನಿವಾರ ಸೀಶೆಲ್ಸ್ ತಲುಪಿದ ಪ್ರಧಾನಿ ಅವರೊಂದಿಗೆ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗೂಲಮ್ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

<><><>

ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ವಲಯದ ನಾಯಕತ್ವಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೀಶೆಲ್ಸ್ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಗಾರ್ಡಿಯನ್ ಆಫ್ ದಿ ಬ್ಲೂ ಹೊರೈಜನ್' ಗೌರವವನ್ನು ನೀಡಿ ಪುರಸ್ಕರಿಸಿದೆ. ಸೀಶೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹೆರ್ಮಿನಿ, ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಪ್ರಧಾನಿ ಮೋದಿಯವರ ಹಸಿರು ದೂರದೃಷ್ಟಿ, ಹವಾಮಾನ ವೈಪರೀತ್ಯದ ವಿರುದ್ಧದ ಹೋರಾಟ ಹಾಗೂ ಕಡಲ ಆರ್ಥಿಕತೆಗೆ ಉತ್ತೇಜನದ ನಿರಂತರ ಶ್ರಮವನ್ನು ಗುರುತಿಸಿ ಈ ಗೌರವ ಸಮರ್ಪಿಸಲಾಗಿದೆ. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರಧಾನಿ, ಈ ಗೌರವವನ್ನು ಹವಾಮಾನ ಬದಲಾವಣೆಯ ಸವಾಲುಗಳ ವಿರುದ್ಧ ಹೋರಾಡುತ್ತಿರುವ ಜಾಗತಿಕ ರಾಷ್ಟ್ರಗಳಿಗೆ ಸಮರ್ಪಿಸಿದರು. ಈ ಹಿಂದೆ ಅವರಿಗೆ ವಿಶ್ವಸಂಸ್ಥೆಯ 'ಚಾಂಪಿಯನ್ ಆಫ್ ದಿ ಅರ್ಥ್' ಹಾಗೂ ಸಿಯೋಲ್ ಶಾಂತಿ ಪ್ರಶಸ್ತಿ'ಗಳು ಲಭಿಸಿವೆ. ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟ ಕೇವಲ ಸರ್ಕಾರಗಳಿಂದ ಸಾಧ್ಯವಿಲ್ಲ. ಸುಸ್ಥಿರ ಜೀವನಶೈಲಿ ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

<><><>

ಪ್ರಧಾನಿ ನರೇಂದ್ರ ಮೋದಿ ನಿನ್ನೆ ಸೀಶೆಲ್ಸ್‌ನಲ್ಲಿ ಮಾರಿಷಸ್ ಪ್ರಧಾನಿ ಡಾ.ನವಿನ್‌ಚಂದ್ರ ರಾಮಗೂಲಮ್ ಅವರನ್ನು ಭೇಟಿ ಮಾಡಿ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಹಕಾರದ ಕುರಿತು ಮಹತ್ವದ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಉಭಯ ನಾಯಕರು ಭಾರತ ಮಾರಿಷಸ್‌ಗೆ ವಿಸ್ತರಿಸಿರುವ 'ವಿಶೇಷ ಆರ್ಥಿಕ ಪ್ಯಾಕೇಜ್' ಅನುಷ್ಠಾನದಲ್ಲಿ ಆಗಿರುವ ಪ್ರಗತಿಯನ್ನು ಪರಾಮರ್ಶಿಸಿದರು. ಮಾರಿಷಸ್‌ನ ಸರ್ವತೋಮುಖ ಅಭಿವೃದ್ಧಿ ಮತ್ತು ಪ್ರಗತಿಗೆ ಭಾರತ ನೀಡುವ ಆದ್ಯತೆಯನ್ನು ಪ್ರಧಾನಿ ಮೋದಿ ಪುನರುಚ್ಚರಿಸಿದರು. ಪ್ರಸ್ತುತ ಚಾಲ್ತಿಯಲ್ಲಿರುವ ದ್ವಿಪಕ್ಷೀಯ ಯೋಜನೆಗಳು ಮಾರಿಷಸ್‌ನ ಆರೋಗ್ಯ ಸೇವೆ, ಪ್ರಾದೇಶಿಕ ಸಂಪರ್ಕ, ಸುಸ್ಥಿರ ಅಭಿವೃದ್ಧಿ ಹಾಗೂ ಕಡಲ ಆರ್ಥಿಕತೆಯ ವೃದ್ಧಿಗೆ ಪ್ರಮುಖ ಕೊಡುಗೆ ನೀಡಲಿವೆ ಎಂದು ಆಶಯ ವ್ಯಕ್ತಪಡಿಸಿದರು.

ಭಾರತದ 'ಮಹಾಸಾಗರ್' ದೃಷ್ಟಿಕೋನ, 'ನೆರೆಹೊರೆ ಮೊದಲು' ನೀತಿ ಹಾಗೂ ಜಾಗತಿಕ ದಕ್ಷಿಣ ಒಕ್ಕೂಟದ ಹಂಚಿಕೆಯ ಬದ್ಧತೆಯ ಅಡಿಯಲ್ಲಿ, ಭಾರತ-ಮಾರಿಷಸ್ ನಡುವಿನ 'ವರ್ಧಿತ ಕಾರ್ಯತಂತ್ರದ ಪಾಲುದಾರಿಕೆಯ ಮಹತ್ವದ ಬಗ್ಗೆ ಉಭಯ ನಾಯಕರು ಸಹಮತ ವ್ಯಕ್ತಪಡಿಸಿದರು.

<><><>

ಯುಕೆ ಪ್ರವಾಸವನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಗ್ರೀಸ್‌ನ ಅಥೆನ್ಸ್ ದೇಶಕ್ಕೆ ಉನ್ನತಮಟ್ಟದ ಉದ್ಯಮ ನಿಯೋಗದೊಂದಿಗೆ ಭೇಟಿ ನೀಡುತ್ತಿದ್ದಾರೆ. ಈ ಭೇಟಿ ಉಭಯ ದೇಶಗಳ ನಡುವಿನ ವ್ಯಾಪಾರ, ಹೂಡಿಕೆ ಮತ್ತು ಕಾರ್ಯತಂತ್ರದ ಆರ್ಥಿಕ ಸಹಕಾರವನ್ನು ಬಲಪಡಿಸುವ ಉದ್ದೇಶ ಹೊಂದಿದೆ. ಗ್ರೀಸ್ ಭೇಟಿಯ ಸಂದರ್ಭದಲ್ಲಿ ಈ ನಿಯೋಗವು 'ಅಥೆನ್ಸ್ ಸ್ಟಾರ್ಟ್‌ಅಪ್ ಬಿಸಿನೆಸ್ ಇನ್ಕ್ಯುಬೇಟರ್' ನಲ್ಲಿ ನಡೆಯಲಿರುವ ಪ್ರಸ್ತುತಿಗಳು ಮತ್ತು ನವೋದ್ಯಮ ಪ್ರದರ್ಶನಗಳಲ್ಲಿ ಭಾಗವಹಿಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಇದರ ಜೊತೆಗೆ ಖಾಸಗಿ ವಲಯದ ಸಹಭಾಗಿತ್ವವನ್ನು ಬಲಪಡಿಸಲು ಮತ್ತು ಹೊಸ ಸಹಯೋಗದ ಅವಕಾಶಗಳನ್ನು ಗುರುತಿಸಲು 'ಅಥೆನ್ಸ್ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯಲ್ಲಿ ಭಾರತ ಮತ್ತು ಗ್ರೀಸ್‌ನ ಪ್ರಮುಖ ಉದ್ಯಮಿಗಳೊಂದಿಗೆ ನಿಯೋಗವು ದುಂಡುಮೇಜಿನ ಸಭೆಗಳನ್ನು ನಡೆಸಲಿದೆ.

<><><>

ಹಾರ್ಮುಜ್ ಜಲಸಂಧಿಯ ವಿವಾದ ಹಾಗೂ ಮಿಲಿಟರಿ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಅಮೆರಿಕ ಮತ್ತು ಇರಾನ್ ದೇಶಗಳು ಪರಸ್ಪರ  ದಾಳಿಗಳನ್ನು ನಿಲ್ಲಿಸಲು ಹಾಗೂ ನಾಳೆಯಿಂದ ಕತಾರ್‌ನ ದೋಹಾದಲ್ಲಿ ಮಾತುಕತೆ ಪುನರಾರಂಭಿಸಲು ಒಪ್ಪಿಕೊಂಡಿವೆ. ಇತ್ತೀಚೆಗೆ ವಾಣಿಜ್ಯ ಹಡಗುಗಳ ಮೇಲಿನ ದಾಳಿ ಮತ್ತು ಪ್ರತಿಯಾಗಿ ಬಹ್ರೇನ್, ಕುವೈತ್‌ನ ಅಮೆರಿಕದ ನೆಲೆಗಳ ಮೇಲೆ ನಡೆದ ಕ್ಷಿಪಣಿ ದಾಳಿಗಳ ನಂತರ ಈ ಕದನ ವಿರಾಮ ಘೋಷಣೆಯಾಗಿದೆ. ಚರ್ಚೆ ಮುಂದುವರಿಯುವವರೆಗೆ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ನೀಡಲು ಉಭಯ ರಾಷ್ಟ್ರಗಳು ಸಮ್ಮತಿಸಿವೆ. ಇದೇ ತಿಂಗಳ ಆರಂಭದಲ್ಲಿ ಸಹಿ ಹಾಕಲಾಗಿದ್ದ ತಿಳುವಳಿಕಾ ಪತ್ರದ 'ಆರ್ಟಿಕಲ್ ೫' ಕುರಿತಾದ ಭಿನ್ನಾಭಿಪ್ರಾಯವೇ ಪ್ರಸ್ತುತ ಸಂಘರ್ಷಕ್ಕೆ ಕಾರಣವಾಗಿದೆ. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನೇತೃತ್ವದಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ಮಾತುಕತೆಯಲ್ಲಿ ಅಮೆರಿಕ ಮಿಲಿಟರಿ

ಮತ್ತು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ ನಡುವೆ ನೇರ ಸಂಪರ್ಕ ಸ್ಥಾಪಿಸಲು ನಿರ್ಧರಿಸಲಾಗಿತ್ತಾದರೂ, ಆದರೆ ಅದು ಇನ್ನು ಕಾರ್ಯರೂಪಕ್ಕೆ ಬಂದಿಲ್ಲ.

<><><>

ಔಷಧಿಗಳು ಶಸ್ತ್ರ ಚಿಕಿತ್ಸಾ ಸಾಮಗ್ರಿಗಳು ಹಾಗೂ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಭಾರೀ ಪ್ರಮಾಣದ ಅಕ್ರಮ ಎಸಗಿದ ಆರೋಪದ ಮೇಲೆ ದೆಹಲಿಯ ಭ್ರಷ್ಟಾಚಾರ ನಿರೋದ ಶಾಖೆ-ಎಸಿಬಿ ಅಂದಿನ ಆರೋಗ್ಯ ಸೇವೆಗಳ ಮಹಾ ನಿರ್ದೇಶಕಿ ಡಾ.ವತ್ಸಲಾ ಅಗರ್ವಾಲ್ ಮತ್ತು ಕೇಂದ್ರೀಯ ಖರೀದಿ ಸಂಸ್ಥೆಯ ಉಪಖಾತೆ ನಿಯಂತ್ರಕ ನೀರಜ್ ಚೋಪ್ರ ಅವರನ್ನು ಬಂಧಿಸಿದೆ.

<><><>

ಕರಾಚಿಯಲ್ಲಿ ಇತ್ತೀಚೆಗೆ ನಡೆದ ಘಟನೆಗೆ ಸಂಬಂಧಿಸಿದಂತೆ ಪಾಕಿಸ್ತಾನ ಮಾಡಿರುವ ಎಲ್ಲಾ ಆರೋಪಗಳನ್ನು ಭಾರತ ಸ್ಪಷ್ಟವಾಗಿ ತಿರಸ್ಕರಿಸಿದ್ದು, ಅವುಗಳನ್ನು ಸಂಪೂರ್ಣ ಆಧಾರ ರಹಿತ ಎಂದು ಕರೆದಿದೆ. ಈ ಕುರಿತು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್, ಪಾಕಿಸ್ತಾನ, ಇತರರ ಕಡೆಗೆ ಬೆರಳು ಮಾಡಿ ತೋರಿಸುವ ಬದಲು ತನ್ನದೇ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ತನ್ನದೇ ನೆಲದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಭಯೋತ್ಪಾದನಾ ಮೂಲಸೌಕರ್ಯಗಳು ವಿರುದ್ಧ ಪಾಕಿಸ್ತಾನ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

<><><>

ವೆನೆಜುವೆಲಾದಲ್ಲಿ ಕಳೆದ ಬುಧವಾರ ಸಂಭವಿಸಿದ ಭೀಕರ ಭೂಕಂಪಗಳಿಗೆ ಮೃತಪಟ್ಟವರ ಸಂಖ್ಯೆ ೧ ಸಾವಿರದ ೪೫೦ಕ್ಕೇರಿಕೆಯಾಗಿದೆ ಎಂದು ವೆನೆಜುವೆಲಾ ಶಾಸನ ಸಭೆಯ ಅಧ್ಯಕ್ಷ ಜಾರ್ಜ್ ರೋಡ್ರಿಗೆಸ್ ತಿಳಿಸಿದ್ದಾರೆ. ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಕುರಿತು ಮಾಹಿತಿ ಹಂಚಿಕೊಂಡಿರುವ ಅವರು, ೭.೨ ಮತ್ತು ೭.೫ ತೀವ್ರತೆಯ ಎರಡು ಪ್ರಬಲ ಭೂಕಂಪಗಳ ನಂತರ ವೆನೆಜುವೆಲಾದಲ್ಲಿ ಇದುವರೆಗೆ ೪೩೦ ಹಗುರದಿಂದ ಸಾಧಾರಣ ಪ್ರಮಾಣದ ಕಂಪನಗಳು ದಾಖಲಾಗಿದೆ ಎಂದಿದ್ದಾರೆ.

<><><>

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ಇಂದು ನವದೆಹಲಿಯಲ್ಲಿ ನಡೆಯಲಿರುವ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂಡಳಿಯ ೧೬ನೇ ಸಮ್ಮೇಳನದಲ್ಲಿ ಸಮಗ್ರ ಶಿಶು ಬಾಲ ಸ್ವಾಸ್ಥ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಪ್ರಕಾರ, 'ಮೊದಲ ಮೂರು ವರ್ಷಗಳು -

ಸಂಪೂರ್ಣ ಆರೈಕೆ" ಪರಿಕಲ್ಪನೆಯಡಿ ಈ ಕಾರ್ಯಕ್ರಮ ಜಾರಿಯಾಗಲಿದೆ. ಜನನದಿಂದ ಮೂರು ವರ್ಷದವರೆಗಿನ ಮಕ್ಕಳಿಗೆ ಮನೆ ಹಾಗೂ ಸಮುದಾಯ ಆಧಾರಿತ ಸಮಗ್ರ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಈಗಿರುವ ಮನೆ ಆಧಾರಿತ ನವಜಾತ ಶಿಶು ಆರೈಕೆ ಮತ್ತು ಮಕ್ಕಳಿಗಾಗಿ ಮನೆ ಆಧಾರಿತ ಆರೈಕೆ ಕಾರ್ಯಕ್ರಮಗಳನ್ನು ವಿಲೀನಗೊಳಿಸಲಾಗುವುದು.

<><><><>

ಎಫ್ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಭಾರತ ಪುರುಷರ ಹಾಕಿ ತಂಡವು ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ೩-೨ ಗೋಲುಗಳ ಅಂತರದಿಂದ ಗೆಲುವು ಸಾಧಿಸಿದೆ. ಲಂಡನ್‌ನಲ್ಲಿ ನಿನ್ನೆ ನಡೆದ ಪಂದ್ಯ ನಿಗದಿತ ಅವಧಿಯಲ್ಲಿ ಗೋಲುರಹಿತ ಡ್ರಾದಲ್ಲಿ ಅಂತ್ಯಗೊಂಡಿತ್ತು. ಬಳಿಕ ನಡೆದ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಭಾರತ ಮೇಲುಗೈ ಸಾಧಿಸಿತು. ಹಾಕಿ ವಿಶ್ವಕಪ್‌ಗೆ ಮುನ್ನ ಎಫ್ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಭಾರತ ಆಡಿದ ಕೊನೆಯ ಪಂದ್ಯ ಇದಾಗಿದ್ದು, ಈ ಗೆಲುವು ತಂಡದ ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ.

<><><><>

ಫಿಫಾ ವಿಶ್ವಕಪ್‌ನ ನಾಕ್‌ಔಟ್ ಹಂತದಲ್ಲಿ ಕೆನಡಾ ತಂಡ ದಕ್ಷಿಣ ಆಫ್ರಿಕಾವನ್ನು ೧-೦ ಗೋಲುಗಳಿಂದ ಮಣಿಸಿ, ವಿಶ್ವಕಪ್ ನಾಕ್‌ಔಟ್ ಹಂತದಲ್ಲಿ ತನ್ನ ಮೊದಲ ಗೆಲುವು ದಾಖಲಿಸಿದೆ. ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆದ ಪಂದ್ಯದಲ್ಲಿ ಕೆನಡಾದ ಸ್ಟೀಫನ್ ಯುಸ್ಟಾಕಿಯೊ ದ್ವಿತೀಯಾರ್ಧದ ಹೆಚ್ಚುವರಿ ಅವಧಿಯ ಎರಡನೇ ನಿಮಿಷದಲ್ಲಿ ನಿರ್ಣಾಯಕ ಗೋಲು ದಾಖಲಿಸಿದರು. ಇದರೊಂದಿಗೆ ಕೆನಡಾ ತಂಡ ಜುಲೈ ೪ರಂದು ಹ್ಯೂಸ್ಟನ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ನೆದರ್ಲೆಂಡ್ಸ್ ಅಥವಾ ಮೊರಾಕೊ ತಂಡವನ್ನು ಎದುರಿಸಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>